Renovation of Temples in Tumkur Taluk

826. Sri DODDATHIMMAIAH (Gulur).—

Will the Minister for Revenue be pleased to state :—

(*a*) whether any representation has been received by the Commissioner for renovation and repairs to the following temples ;

(i) Shri Channakeshavaswamy temple at Kaidala, Gulur Hobli, Tumkur Taluk

(ii) Sri Anjaneyaswamy temple at Sathaghatta, Uridigere Hobli, Tumkur Taluk ;

(*b*) if so, the action the Government has taken in that direction?

Sri N. HUTCHAMASTHY GOWDA (Minister for Revenue).—

(*a*) Yes.

(*b*) As regards item No. 1 the estimate for the work is under preparation. A sum of Rs. 3000 has been placed at the disposal of the Public Works Department for taking up repairs to the compound wall of the temple.

As regards item No. 2 estimates have been called for from the Tahsildar, Tumkur.

Incovenience to Members

re : Issue of Public Gallery Passes

ಶ್ರೀ ಕೋಣಂದೂರು ಲಿಂಗಪ್ಪ.—ಸನ್‌ಮಾನ್ಯ ಅಧ್ಯಕ್ಷಣೆಯವರೇ ಒಂದು ಪ್ರಶ್ನೆ ಹಿಂದೆ ಎತ್ತಿದ್ದೆ. ಗ್ಯಾಲರಿಗೆ ಪ್ರವೇಶವನ್ನು ನೀಡುವುದರ ಬಗ್ಗೆ ಪರಿಪಶ್ರವನ್ನು ಕಳುಹಿಸಿದ್ದೀರಿ. ಅದರ ಬಗ್ಗೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ತಾವು ಬಂದು ಆ ವಿಷಯವನ್ನ ಆಫೀಸ್ ಚೇಂಬರ್‌ನಲ್ಲಿ ಮಾತನಾಡಿ.

Notice under Rule 312 *re* : agreement on the Cauvery Water

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ರೂಲ್ 312 ರ ಪ್ರಕಾರ 4 ದಿವಸಗಳ ಹಿಂದೆ ಕಾವೇರಿ ನೀರಿನ ಬಗ್ಗೆ ಒಂದು ನೋಟೀಸ್ ಕಳುಹಿಸಿದೆ. ಮುಖ್ಯಮಂತ್ರಿಗಳಾಗಲೀ ಚನ್ನಬಸಪ್ಪ ನವರಾಗಲೀ ಉತ್ತರ ಕೊಡಬಹುದು. ಇದು ಮುಖ್ಯವಾದ ವಿಷಯ ಇವತ್ತು ಪತ್ರಿಕೆಗಳಲ್ಲಿ ಕೂಡ ಬಂದಿದೆ. ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗುವವರಿದ್ದಾರೆ. ಮೀಟಿಂಗ್ ಈ ತಿಂಗಳು 29 ನೇ ತಾರೀಖು ನಡೆಯುತ್ತದೆ. ಅವರು ಡೆಲ್ಲಿಗೆ ಹೋಗುವುದಕ್ಕೆ ಮುಂಚೆ ಇಲ್ಲಿ ಚರ್ಚೆ ಮಾಡುವುದು ಒಳ್ಳೆಯದು. 50 ವರ್ಷಗಳ ಹಿಂದೆ ಮಾಡಿದ ಅಗ್ರಿಮೆಂಟನ್ನು ಮುಂದುವರಿಸುವ ಅಭಿಪ್ರಾಯವಿದೆ. ಇದರ ಬಗ್ಗೆ ಬಹಳ ಜನಗಳ ಮನಸ್ಸಿನಲ್ಲಿ ಕೋಲಾಹಲ ಉಂಟಾಗಿರುತ್ತದೆ. ಮುಂದುವರಿಯಬೇಕೇ ಬೇಡವೇ ಎಂಬ ಪ್ರಶ್ನೆ ಬಂದಿದೆ. ಈ ಮನೆಯೊಳಗೆ ತೀವ್ರವಾದ ಚರ್ಚೆ ನಡೆದು ಈ ಅಗ್ರಿಮೆಂಟು ಮುಂದುವರಿಯಕೂಡದು, ಈ ಅಗ್ರಿಮೆಂಟ್‌ನಿಂದ ನಮ್ಮ ರಾಜ್ಯಕ್ಕೆ ಮೋಸವಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಿದ್ದರೂ ಸಹ ಅದರ ಬಗ್ಗೆ ತಿಳುವಳಿಕೆ ಕೊಟ್ಟಿಲ್ಲ. ಅವರು ಬರೀ ಡೆಲ್ಲಿಗೆ ಹೋಗಿ ಮಾತನಾಡಿಕೊಂಡು ಬಂದರೆ ಸಾಲದು. ಇದರ ಬಗ್ಗೆ ಚರ್ಚೆ ಮಾಡಿ ಈ ಹಾಸಿನ ಅಭಿಪ್ರಾಯ ತೆಗೆದುಕೊಂಡು ಆಮೇಲೆ ಅಲ್ಲಗೆ ಹೋಗಿ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ.